## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು

## ಸಿಸಿ ಸಂಖ್ಯೆ: 820/2015

ಪಿರ್ಯಾದುದಾರರು : ಹುಲ್ಲಹಳ್ಳಿ ಪೊಲೀಸ್ ಠಾಣೆ .

**ವಿರುದ್ಧ**

ಆರೋಪಿಗಳು :
1. **ಚನ್ನಮ್ಮ - ಮೃತರಾಗಿರುತ್ತಾರೆ.**
2. ಪುಟ್ಟನಾಯಕ
3. ಮಹದೇವನಾಯಕ
4. ಗೋವಿಂದ ನಾಯಕ

ಮೇಲ್ಕಂಡ ಎಲ್ಲರ ವಾಸಃ ನಾಯಕರ ಬೀದಿ, ಹಾಡ್ಯ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

## :: ದೋಷಾರೋಪಣೆ ::

*ಶ್ರೀ ರಘುರಾಮ ಎನ್. ಎಸ್.,* ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ನಿರೂಪಿಸುತ್ತಿದ್ದೇನೆ.

ದಿನಾಂಕ 30.01.2015 ರಂದು ಬೆಳಿಗ್ಗೆ 11.30 ಗಂಟೆಯ ಸಮಯದಲ್ಲಿ ಹುಲ್ಲಹಳ್ಳಿ ಠಾಣಾ ಸರಹದ್ದಿಗೆ ಸೇರಿದ ಹಾಡ್ಯ ಗ್ರಾಮದ ಬಳಿ ನುಗು ಮೇಲ್ದಂಡೆ ನಾಲೆಯ ಸರಪಳಿ ಸಂಖ್ಯೆ 22 ನೇ ಕಿ.ಮಿ. ಬಳಿಯ ನೀರಾವರಿ ಇಲಾಖೆಯ ಪರಿವೀಕ್ಷಣೆಯ ಜಾಗಕ್ಕೆ ಆರೋಪಿ 2 ರಿಂದ 4 ನೀವುಗಳು ಮೃತ 1 ನೇ ಆರೋಪಿ ಜೊತೆ ಸಮಾನ ಉದ್ದೇಶದಿಂದ ಅಕ್ರಮವಾಗಿ ಪ್ರವೇಶ ಮಾಡಿರುವ ಕಾರಣ ಭಾರತೀಯ ದಂಡ ಸಂಹಿತೆ ಕಲಂ 447 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿ 2 ರಿಂದ 4 ನೀವುಗಳು ಮೃತ 1 ನೇ ಆರೋಪಿ ಜೊತೆ ಸಮಾನ ಉದ್ದೇಶದಿಂದ ನೀರಾವರಿ ಇಲಾಖೆಯ ಪರಿವೀಕ್ಷಣೆಯ ಜಾಗಕ್ಕೆ ಅಕ್ರಮವಾಗಿ ಪ್ರವೇಶ ಮಾಡಿ ಹದ್ದುಬಸ್ತು ಕಲ್ಲನ್ನು ಕಿತ್ತು ಹಾಕಿ ಚರಂಡಿಯನ್ನು ಮುಚ್ಚಿ ಹಾಕಿರುವ ಕಾರಣ

ಭಾರತೀಯ ದಂಡ ಸಂಹಿತೆ ಕಲಂ 434 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೂರನೆಯದಾಗಿ, ಅದೇ ದಿನ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿ 2 ರಿಂದ 4 ನೀವುಗಳು ಮೃತ 1 ನೇ ಆರೋಪಿ ಜೊತೆ ಸಮಾನ ಉದ್ದೇಶದಿಂದ ನೀರಾವರಿ ಇಲಾಖೆಯ ಪರಿವೀಕ್ಷಣೆಯ ಜಾಗಕ್ಕೆ ಅಕ್ರಮವಾಗಿ ಪ್ರವೇಶ ಮಾಡಿ ಹದ್ದುಬಸ್ತು ಕಲ್ಲನ್ನು ಕಿತ್ತು ಹಾಕಿ ಚರಂಡಿಯನ್ನು ಮುಚ್ಚಿ ಹಾಕಿ ನಷ್ಟವುಂಟು ಮಾಡಿರುವ ಕಾರಣ ಭಾರತೀಯ ದಂಡ ಸಂಹಿತೆ ಕಲಂ 427 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ನಾಲ್ಕನೆಯದಾಗಿ, ಅದೇ ದಿನ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿ 2 ರಿಂದ 4 ನೀವುಗಳು ಮೃತ 1 ನೇ ಆರೋಪಿ ಜೊತೆ ಸಮಾನ ಉದ್ದೇಶದಿಂದ ನೀರಾವರಿ ಇಲಾಖೆಯ ಪರಿವೀಕ್ಷಣೆಯ ಜಾಗಕ್ಕೆ ಅಕ್ರಮವಾಗಿ ಪ್ರವೇಶ ಮಾಡಿ ಸದರಿ ಸ್ಥಳದಲ್ಲಿ ಟಮೋಟೋ ಫಸಲನ್ನು ಬೆಳೆದಿರುವ ಕಾರಣ ನೀವು ಕರ್ನಾಟಕ ಭೂಕಂದಾಯ ಇಲಾಖೆ ಕಾಯ್ದೆ ಯ ಕಲಂ 192(ಎ)ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿ 2 ರಿಂದ 4 ನೀವುಗಳು ಮೃತ 1 ನೇ ಆರೋಪಿ ಜೊತೆ ಸಮಾನ ಉದ್ದೇಶದಿಂದ ನೀರಾವರಿ ಇಲಾಖೆಯ ಪರಿವೀಕ್ಷಣೆಯ ಜಾಗಕ್ಕೆ ಅಕ್ರಮವಾಗಿ ಪ್ರವೇಶ ಮಾಡಿ ಹದ್ದುಬಸ್ತು ಕಲ್ಲನ್ನು ಕಿತ್ತು ಹಾಕಿ ಚರಂಡಿಯನ್ನು ಮುಚ್ಚಿ ಹಾಕಿ ಅಕ್ಕಪಕ್ಕದ ಜಮೀನಿನ ರೈತರಿಗೆ ಅವರ ಕೃಷಿ ಚುಟುವಟಿಕೆಗಳಿಗೆ ತೊಂದರೆ ಉಂಟು ಮಾಡಿರುವ ಕಾರಣ ಕರ್ನಾಟಕ ನೀರಾವರಿ ಅಧಿನಿಯಮ 55 (1) ಮತ್ತು (4) 1965 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೇಲ್ಕಂಡ ನಿಮ್ಮ ಮೇಲಿನ ಆರೋಪಣೆಯ ಬಗ್ಗೆ ವಿಚಾರಣೆಯಾಗಲು ಈ ಮೂಲಕ ಆದೇಶಿಸುತ್ತೇನೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ.,
ನಂಜನಗೂಡು